



ಪೋಷಕರೇ ನಿಮ್ಮ ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಅಸಹಜತೆ ಕಂಡು ಬರುತ್ತಿದೆಯೇ? ನಿಮ್ಮ ಸಮಸ್ಯೆಗಳಿಗೆ ಆತಂಕಗಳಿಗೆ ಮನೋವಿಜ್ಞಾನಿ **ಡಾ.ಅ.ಶ್ರೀಧರ** ಅವರು ಉತ್ತರಿಸುತ್ತಾರೆ.

▶▶ ನನ್ನ ಮಗ ಈಗ ಎಸ್ಸೆಸ್ಸೆಲ್ಸಿ 3ನೇ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾನೆ. ಅವನಿಗೆ ಓದುಬರಹದಲ್ಲಿ ಎಷ್ಟು ಆಸಕ್ತಿ ಎನ್ನುವುದು ಸರಿಯಾಗಿ ತಿಳಿಯುತ್ತಿಲ್ಲ. ಯಾವ ತರಗತಿಯಲ್ಲೂ ಅವನಷ್ಟಕ್ಕೆ ಅವನೇ ಓದಿಲ್ಲ. ಒತ್ತಡ, ಮನೆಪಾಠದಿಂದ ಕೊನೆ ಘಳಿಗೆಯ ಸಿದ್ಧತೆಯ ಮೂಲಕ ತೇರ್ಗಡೆಯಾಗುವುದು ಅವನ ಕ್ರಮ. ಈಗವನು ಬೇರೊಂದು ಊರಲ್ಲಿ ಪದವಿಪೂರ್ವ ಶಿಕ್ಷಣ ಪಡೆಯಲು ಇಷ್ಟಪಟ್ಟಿದ್ದಾನೆ. ಅವನ ಗೆಳೆಯರನೇಕರು ಅಲ್ಲಿದ್ದಾರೆ. ಅವರೊಂದಿಗೆ ಸಮಯ ಕಳೆಯಬಹುದೆನ್ನುವ ಉದ್ದೇಶವಿರಬಹುದು. ಇದರ ಬಗ್ಗೆ ನಮ್ಮ ವಿರೋಧವೇನೂ ಇಲ್ಲ. ಆ ಊರಲ್ಲಿರುವ ಕಾಲೇಜು ಮತ್ತು ಅದಕ್ಕೆ ಸೇರಿಕೊಂಡಿರುವ ವಿದ್ಯಾರ್ಥಿ ನಿಲಯದಲ್ಲಿ ಇದ್ದು ಓದಬಹುದು ಎನ್ನುವುದು ನಮ್ಮ ಸಲಹೆ. ಇದಕ್ಕವ ಒಪ್ಪುತ್ತಿಲ್ಲ. ಓದುವ ಹಾಗಿದ್ದರೇ ಅಲ್ಲಿರುವ ನೆಂಟರ ಮನೆಯಲ್ಲಿದ್ದುಕೊಂಡು ಓದುವೇ ಇಲ್ಲವಾದರೆ ಬಾಡಿಗೆ ಮನೆ ಮಾಡಿಕೊಡಿ, ಅಲ್ಲಿದ್ದು ಓದುವೆ ಎನ್ನುತ್ತಿದ್ದಾನೆ. ಇವೆಲ್ಲ ಸಾಧ್ಯವಾಗದ ಮಾತೆನ್ನುವುದು ಗೊತ್ತು. ಏಕೆಂದರೆ ಅವನಷ್ಟಕ್ಕೆ ಅವನಿದ್ದುಕೊಂಡು ಓದುವ ಸ್ವಭಾವ ಅವನಲ್ಲಿ ಇಲ್ಲ. ತನ್ನದೇ ಸಣ್ಣ ಕೆಲಸಗಳನ್ನು ಸಹ ಅವನು ಮಾಡಿಕೊಳ್ಳುವುದಿಲ್ಲ. ಹೀಗಿರುವವ ಏಕಾಏಕಿ ಸ್ವತಂತ್ರವಾಗಿ ಓದುತ್ತಾನೆ ಎನ್ನುವುದರಲ್ಲಿ ಯಾವ ನಂಬಿಕೆಯೂ ಇಲ್ಲ. ಓದುವುದಾದರೇ ಆ ಊರಿನಲ್ಲಿ ಮಾತ್ರ, ಇಲ್ಲವಾದಲ್ಲಿ ಓದೇ ಬೇಡವೆಂದು ಮುನಿಸಿಕೊಂಡು ನಮ್ಮೊಂದಿಗೆ ಮಾತು ಬಿಟ್ಟಿದ್ದಾನೆ. ಇಂತಹದೊಂದು ಪರಿಸ್ಥಿತಿಯನ್ನು ಎದುರಿಸುವುದು ಹೇಗೆ ಎನ್ನುವುದೇ ತಿಳಿಯದಾಗಿದೆ. ಮಾರ್ಗದರ್ಶನ ನೀಡಿ.

–ಅನುರಾಧ ಶಂಕರ್, ಚಿಕ್ಕಮಗಳೂರು

ಅತ್ಯಂತ ದುರದೃಷ್ಟಕರ ಸಂಗತಿ ಇದು. ಶಿಕ್ಷಣ ಮುಂದುವರೆಸಲು ಯಾವ ಸೌಕರ್ಯವೂ ಇರದಂತಹವರೊಂದಿಗೆ ಹೋಲಿಸಿ ನೋಡಿದಾಗ ಇದೆಂತಹ ವಿಚಿತ್ರವೆನಿಸುತ್ತದೆ. ನಿಮ್ಮ ಮಗನ ಮನಸ್ಸಿನಲ್ಲಿ ಓದಿಗಿಂತಲೂ ಗೆಳೆಯರ ಜತೆ ಸಮಯ ಕಳೆಯುವುದು ಬಹಳ ಮುಖ್ಯ ಎನ್ನುವುದು ನಿಮಗೆ ಈಗಾಗಲೇ ಸ್ಪಷ್ಟವಾಗಿದೆ. ಅವನ ಮನ ಗೆಲ್ಲುವ ಅಥವಾ ಬದಲಾಯಿಸುವ ಕೆಲಸವನ್ನು ಮಾಡುವುದು ಸರಿಯೆನಿಸುತ್ತದೆ. ಅವನಿಗೆ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ಇರದಿದ್ದ ಪಕ್ಷದಲ್ಲಿ ಕಾಲಹರಣಕ್ಕಾಗಿ ಮತ್ತೊಂದು ಊರು, ಸ್ನೇಹಿತರ ಸಹವಾಸಕ್ಕೆ ನಿಮ್ಮ ಮನಸ್ಸು ಮತ್ತು ಆರ್ಥಿಕತೆ ಬೆಂಬಲ ನೀಡಬೇಕೇ ಎಂಬ ಬಗ್ಗೆಯೂ ಆಲೋಚಿಸಿ. ಒಂದುವೇಳೆ ಅವನಲ್ಲಿ ಪಿಯು ಶಿಕ್ಷಣದತ್ತ ಮನಸ್ಸಿಲ್ಲವೆನ್ನುವುದು ಖಚಿತವಾದರೆ ಬೇರೆ ಯಾವುದಾದರೂ ರೀತಿಯ ಶಿಕ್ಷಣ, ತರಬೇತಿಯತ್ತ ಮನಸ್ಸು ಮಾಡುವಂತೆ ಪ್ರೋತ್ಸಾಹಿಸಲೂಬಹುದು. ಹಠಮಾರಿತನಕ್ಕೆ ಮಣಿದು ಅವನಿಚ್ಛೆಯನ್ನು ಪೂರೈಸುವುದರಿಂದ ಅವನಿಗೆ ಅಗತ್ಯವಿರುವ ಮಾರ್ಗದರ್ಶನ ಸಿಗದೇ ಹೋಗಬಹುದು. ಹದಿಹರೆಯದಲ್ಲಿ ಒರಟುತನ ಕೆಲ ಮಕ್ಕಳಲ್ಲಿ ಇರುವುದುಂಟು. ಆದುದರಿಂದ ನಿಮ್ಮೊಂದಿಗೆಯೇ ಇದ್ದು ಅವನ ಶಿಕ್ಷಣ ಮುಂದುವರೆಸುವುದರತ್ತವೇ ನಿಮ್ಮ ಗಮನ ಇರಲಿ.

▶▶ ನನ್ನ ಮಗಳು ಈಗ 10ನೇ ತರಗತಿಗೆ ಪ್ರವೇಶಿಸಿದ್ದಾಳೆ. ಅವಳು ಶಿಶುವಿಹಾರದಿಂದಲೂ ಅದೇ ಶಾಲೆಯ ವಿದ್ಯಾರ್ಥಿ. ಏಳನೆಯ ತರಗತಿಯವರೆಗೆ ಚೆನ್ನಾಗಿಯೇ ಅಂಕ ಗಳಿಸುತ್ತಿದ್ದಳು. ಎಂಟನೆಯ ತರಗತಿಯಿಂದ ಓದುವುದರಲ್ಲಿ ಆಸಕ್ತಿ ಕಡಿಮೆಯಾಗಿ ಉತ್ತಮ ಅಂಕಗಳನ್ನು ಗಳಿಸಿಲ್ಲ. ಎಲ್ಲರೊಂದಿಗೂ ಸಭ್ಯತೆ, ಸಹನೆಯಿಂದ ವರ್ತಿಸಿ ಒಳ್ಳೆಯ ಮಗು ಎಂದು ಹೆಸರು ಸಂಪಾದಿಸಿದ್ದಾಳೆ. ನಮ್ಮೊಂದಿಗೆಯೂ ಹಾಗೆಯೇ ಇದ್ದಳು. ಮನೆ ಕೆಲಸಕ್ಕೆ ನೆರವಾಗುವುದು, ತನ್ನ ಕೆಲಸವನ್ನು ನಿಷ್ಠೆಯಿಂದ ಮಾಡುವುದು ಮತ್ತು ನಮ್ಮೊಂದಿಗೆ ಪ್ರೀತಿ, ಅಕ್ಕರೆಯಿಂದ ಇರುತ್ತಿದ್ದಳು. ಈಗಂತೂ ಅವಳನ್ನು ಮಾತಾಡಿಸುವುದೇ ಕಷ್ಟ. ಪ್ರತಿಯೊಂದಕ್ಕೂ ಸಿಡಿಮಿಡಿಗೊಳ್ಳುತ್ತಾಳೆ. ಅಪ್ಪ, ಅಮ್ಮ ಎಂಬ ಗೌರವ ಇಲ್ಲದಂತೆ ವರ್ತಿಸುತ್ತಾಳೆ. ಓದು ಬರಹದಲ್ಲಿ ಆಸಕ್ತಿ ಕಡಿಮೆ. ಸದಾ ಕನ್ನಡಿ ಎದುರು ನಿಂತು ತನ್ನ ಅಂದ ನೋಡುವ ಅಭ್ಯಾಸ ಮಾಡಿಕೊಂಡಿದ್ದಾಳೆ. ತಿಂಡಿ, ಕಾಫಿ ಎಲ್ಲ ಕನ್ನಡಿ ಎದುರಿಗೆ. ಬುದ್ಧಿಮಾತು ಹೇಳಿದರೆ ಎದುರು ಮಾತಾಡುವುದು ಇಲ್ಲವೆ ಮುನಿಸಿಕೊಳ್ಳುವುದು ಸಾಮಾನ್ಯವಾಗಿದೆ. ಅವಳ ಶಾಲೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಬೇಕು ಎಂದೆನಿಸುತ್ತದೆ. ಆದರೆ, ನಮ್ಮ ಮನೆಯವರು ಇದಕ್ಕೆ ಒಪ್ಪುತ್ತಿಲ್ಲ. ಹಾಗೆಯೇ ಅವಳ ಗೆಳೆಯರ ಮೂಲಕವಾದರೂ ತಿಳಿವಳಿಕೆ ಕೊಡಿಸೋಣ ಅಂದರೆ ಅದಕ್ಕೂ ನಮ್ಮ ಮನೆಯವರ ಸಮ್ಮತಿ ಇಲ್ಲ. ನಾನು ಮತ್ತು ನನ್ನ ಗಂಡ ಕೆಲಸದಲ್ಲಿದ್ದೇವೆ. ಅವಳಿಗೆ ಯಾವ ರೀತಿಯಲ್ಲೂ ಕೊರತೆಯನ್ನು ಉಂಟು ಮಾಡಿಲ್ಲ. ಪ್ರೀತಿಯಿಂದಲೇ ಬೆಳೆಸುತ್ತಿದ್ದೇವೆ. ಹೀಗಿದ್ದರೂ ಅವಳೇಕೆ ಹೀಗೆ? ಇಂತಹ ವರ್ತನೆ ಕೇವಲ ಬಂದು ಹೋಗುವಂತಹದ್ದೇ? ಅಥವಾ ಇನ್ನು ಮುಂದೆಯೂ ಹೀಗೆಯೇ ಮುಂದುವರೆಯುವುದೆ? ಅವಳ ಸ್ವಭಾವವನ್ನು ಅರ್ಥಮಾಡಿಕೊಂಡು ಯಾವ ರೀತಿಯಲ್ಲಿ ನಾವು ವರ್ತಿಸಬೇಕು ಎನ್ನುವುದನ್ನು ತಜ್ಞರಾದ ತಾವು ತಿಳಿಸಬಲ್ಲರಿ ಎನ್ನುವ ನಂಬಿಕೆ ನಮ್ಮಲ್ಲಿದೆ. ದಯಮಾಡಿ ಸಲಹೆ ನೀಡಿ.

–ಸುನಿತ, ಹುಬ್ಬಳ್ಳಿ

ಹರೆಯದ ದಿನಗಳಲ್ಲಿ ಮಕ್ಕಳ ವರ್ತನೆಯಲ್ಲಿ ಇಂತಹ ಬದಲಾವಣೆಗಳು ಸಹಜ. ಅಂದರೆ, ತಮ್ಮ ಅಂದಚೆಂದದ ಬಗ್ಗೆ ಆಸಕ್ತಿ ವಹಿಸುವುದು ಹೆಚ್ಚು. ಸಮವಯಸ್ಕರಲ್ಲಿ ಕಾಣಿಸಿಕೊಳ್ಳುವ ಶರೀರ ಮತ್ತು ಮನಸ್ಸಿನ ಬದಲಾವಣೆಗಳೂ ಸಹ ಹೊಸ ರೀತಿಯ ವರ್ತನೆಗಳನ್ನು ಪ್ರಚೋದಿಸಬಲ್ಲದು. ಎಲ್ಲಕ್ಕಿಂತ ಮಕ್ಕಳ ಮನಸ್ಸನ್ನು ಬದಲಾಯಿಸುವಂತಹ ವಾತಾವರಣ ಶಾಲೆ ಮತ್ತು ಹೊರಗಡೆ ಹೆಚ್ಚಾಗಿರುತ್ತದೆ. ಹರೆಯದಲ್ಲಿ ಜತೆಗಾರರೊಂದಿಗೆ ಪೈಪೋಟಿ ಮತ್ತು ಗಮನ ಸೆಳೆಯುವ ಮನಸ್ಸು ಹೆಚ್ಚಾಗಿರುತ್ತದೆ. ಈ ದೃಷ್ಟಿಯಿಂದ ತಮ್ಮ ಹಾವಭಾವ ಮತ್ತು ನಡೆನುಡಿಗಳನ್ನು ಮೇಲಿಂದ ಮೇಲೆ ಕೆಲವು ಮಕ್ಕಳು ಪರೀಕ್ಷಿಸಿಕೊಳ್ಳುವ ಗುಣ ಪ್ರಬಲವಾಗಿರುತ್ತದೆ. ಹೆಚ್ಚಿನ ಸಮಯದಲ್ಲಿ ಇಂತಹ ಗುಣಗಳು ಅಲ್ಪ ಸಮಯವಿದ್ದು ಬದಲಾಗುತ್ತದೆ. ಈಗ ನಿಮ್ಮ ಮಗಳು ಹೊಸ ತರಗತಿಗೆ ಕಾಲಿಟ್ಟಿದ್ದಾಳೆ. ಸಾಮಾನ್ಯವಾಗಿ ಹತ್ತನೆಯ ತರಗತಿಯನ್ನು ಪ್ರವೇಶಿಸುವ ಅನೇಕ ಮಕ್ಕಳಲ್ಲಿ ತಾವಿನ್ನು ಸಣ್ಣ ಮಕ್ಕಳಲ್ಲಾ, ಸ್ವತಂತ್ರವಾಗಿ ವರ್ತಿಸಬಲ್ಲೆವು ಎನ್ನುವಂತಹ ಭಾವನೆ ಬರುವುದುಂಟು. ಇದಕ್ಕೆ ಶರೀರದಲ್ಲಿ ಆಗುವ ಬದಲಾವಣೆಗಳು ಕಾರಣವಿರುತ್ತದೆ. ಇದಲ್ಲದೇ ಮನೆಯಲ್ಲಿ ಒಬ್ಬಳೇ ಹೆಚ್ಚಿನ ಸಮಯ ಕಳೆಯಲು ಅವಕಾಶವಿರುವುದರಿಂದ ತನ್ನತ್ತವೇ ಗಮನ ಕೊಡುವ ಅಭ್ಯಾಸವನ್ನು ಮಾಡಿಕೊಂಡಿರಬಹುದು. ಇದು ಹೀಗೆಯೇ ಮುಂದುವರಿಯುತ್ತದೆ ಎನ್ನುವಂತಹ ಆತಂಕ ಬೇಡ. ಇನ್ನು ಓದು ಬರೆಹದಲ್ಲಿ ಹಿಂದಿದ್ದಾಳೆ ಎನ್ನುವುದರತ್ತ ನಿಗಾ ಕೊಡಬೇಕಾಗುತ್ತದೆ. ಪದೇ ಪದೇ ಓದು ಎನ್ನುವುದಕ್ಕಿಂತ ಯಾವ ವಿಷಯದಲ್ಲಿ ಹಿಂದಿದ್ದಾಳೆ, ತರಗತಿಯಲ್ಲಿ ಆಸಕ್ತಿಯಿಂದ ಪಾಠ ಕಲಿಯುತ್ತಿದ್ದಾಳೆಯೇ ಎನ್ನುವುದರತ್ತ ನಿಮ್ಮ ಗಮನ ಹರಿಸಿ.ಅವಳ ಶಿಕ್ಷಕರನ್ನು ಭೇಟಿ ಮಾಡಿ ಯಾವ ವಿಷಯದಲ್ಲಿ ಅವಳಿಗೆ ಸಾಮರ್ಥ್ಯವಿದೆ, ತೊಂದರೆ ಯಾವ ಹಂತದಲ್ಲಿ ಆಗುತ್ತಿದೆ ಎನ್ನುವ ಬಗ್ಗೆ ತಿಳಿದುಕೊಳ್ಳುವುದು ಒಳ್ಳೆಯದು. ಎಷ್ಟೋ ಸಲ ಕೀಳರಿಮೆಯೂ ಮಕ್ಕಳ ವರ್ತನೆಯ ಮೇಲೆ ಪರಿಣಾಮ ಬೀರಬಲ್ಲದು. ಆದ್ದರಿಂದ ಶಾಲೆಯ ವಾತಾವರಣದಲ್ಲಿ ಅವಳ ವರ್ತನೆ ಹೇಗಿದೆ ಎನ್ನುವುದನ್ನು ತಿಳಿಯುವುದರಲ್ಲಿ ತಪ್ಪಿಲ್ಲ. ಆದರೆ ಅವಳ ಗೆಳೆಯರೊಂದಿಗೆ ಅವಳ ವರ್ತನೆಗಳ ಬಗ್ಗೆ ದೂರು ಹೇಳುವುದು, ಅಥವಾ ವಿಮರ್ಶೆ ಮಾಡುವುದು ಬೇಡ. ಅವಳಿಗೆ ಇಷ್ಟವಾಗದಿರುವುದಕ್ಕೆ ಕಾರಣವನ್ನು ತಿಳಿದುಕೊಂಡರೆ ಮತ್ತಷ್ಟು ಒಳ್ಳೆಯದೇ. ಅವಳಿಗೆ ತೃಪ್ತಿಕೊಡುವ, ಬೇಸರ ತರುವ ಸನ್ನಿವೇಶಗಳನ್ನು ಗುರುತಿಸಿ. ಅಂತಹ ಸಮಯದಲ್ಲಿ ತಿಳಿವಳಿಕೆಯ ಮಾತನ್ನು ಆಡುವುದು ಬೇಡ. ಹುಮ್ಮಸಿನಿಂದ ಇರುವ ಸಮಯದಲ್ಲಿ ಅವಳ ಸ್ವಭಾವದ ಬಗ್ಗೆ ವಿಮರ್ಶೆ ಮಾಡುವ ಪ್ರಯತ್ನ ಮಾಡುವುದು ಒಳ್ಳೆಯದು. ನಿಮ್ಮ ಮಗಳ ಅಸಹನೆ, ಸಿಟ್ಟಿನ ಸ್ವಭಾವನ್ನು ನಿಮ್ಮ ಸಿಟ್ಟು ಮತ್ತು ಅಸಹನೆಯ ಸ್ವಭಾವದಿಂದ ಗೆಲ್ಲುವ ಪ್ರಯತ್ನ ಬೇಡ.

**ನಿಮ್ಮ ಪ್ರಶ್ನೆಗಳನ್ನು ಕಳುಹಿಸಬೇಕಾದ ವಿಳಾಸ:** ಸಂಪಾದಕರು, 'ಸುಧಾ', 'ನನ್ನ ಮಗು ಹೀಗೇಕೆ?' ವಿಭಾಗ, 75, ಎಂಜಿ. ರಸ್ತೆ, ಬೆಂಗಳೂರು-560001, ಮೊಬೈಲ್ 9880937122